ಶ್ರೀ ಆರ್. ಎಲ್. ಜಾಲಪ್ಪ.—ಈಗಾಗಲೇ ಗೇಣಿದಾರರಿಂ ಹಣವನ್ನು ಕಟ್ಟಬೇಕಾಗಿಲ್ಲವೆಂದೆ ರ್ಕಾರದವರು ತೀರ್ಮಾನ ಕೈಗೊಂಡಿದ್ದಾರೆ. ಪಿ. ಎಲ್. ಡಿ. ಬ್ಯಾಂಕಿನಿಂದ ಹಿಂದೆ ಸಾಲಮಾಡಿ ಏನು ಣವನ್ನು ಪಡೆದಿರುತ್ತಾರೆ. ಆ ಹಣವನ್ನು ಕಟ್ಟಬೇಕೇ ಅಥವಾ ಬಿಡಬೇಕೇ ಎನ್ನುವ ಬಗ್ಗೆ ಸರ್ಕಾರ ಂದ ಯಾವ ತೀರ್ಮಾನ ಆಗಿಲ್ಲ ತೀರ್ಮಾನ ಆದಮೇಲೆ ಸೂಕ್ತ ಸಲಹೆಯನ್ನು ಕೊಡಲಾಗುತ್ತದೆ.

(XVI) ಶಿವಮೊಗ್ಗ ಜಿಲ್ಲೆಯ ಅರಣ್ಯ ಹರಾಜಿನಲ್ಲಿ ನಡೆದಿರುವ ಮೋಸದ ಬಗೆ

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ ಶಿವಮೊಗ್ಗ ಜಿಲ್ಲೆ ಅರಣ್ಯ ಇಲಾಖೆ ಂಲ್ಲಿ ಸುಮಾರು ೩೦-೪೦ ಲಕ್ಷ ರೂಪಾಯಿಗಳ ಬಾರೀ ಮೋಸ ನಡೆದಿರತಕ್ಕಂಥದ್ದು ಇತ್ತೀಚೆಗೆ ಬೆಳಕಿಗೆ ಂದಿದೆ. ಶ್ರೀ ಹಿರಣ್ಯಯ್ಯ ಎಂಬುವರು ಅರಣ್ಯ ಹರಾಜು ನಡೆದಾಗ ಖರೀದಿಸಿ ಸರ್ಕಾರಕ್ಕೆ ಬೋಗಸ್ ಲನ್ನನ್ನು ಕೊಟ್ಟು ಮೋಸ ಮಾಡಿದ್ದಾರೆ. ಇದೇ ತಿಂಗಳಲ್ಲಿ ಅರಣ್ಯ ಇಲಾಖೆಗೆ ಕಟ್ಟಬೇಕಾಗಿದ್ದ ೫೦ ವಿರೆ ರೂಪಾಯಿಗಳಿಗೆ ಇಪ್ಪತ್ತೈದು ಪರ್ಸೆಂಟ್ ಹಣವನ್ನು ಕಟ್ಟಿ ಉಳಿದ ಹಣಕ್ಕೆ ಹೆಚ್ಚಿನಲಾಭಕ್ಕೆ ೂಟೆರಂತ್ತಾರೆಂಬ ದೂರು ಇರುತ್ತದೆ. ಇದೇರೀತಿಯಲ್ಲಿ ಸರ್ಕಾರಕ್ಕೆ ಸುಮಾರು ಅರಣ್ಯ ಹರಾಜು ಾಡುವುದರಿಂದ ೩೦-೪೦ ಲಕ್ಷ ರೂಪಾಯಿಗಳಂ ನಷ್ಟವಾಗಿರುತ್ತದೆ. ಕಳೆದ ೨-೩ ವರ್ಷಗಳಿಂದಲೂ ರೀತಿ ನಡೆಯುತ್ತಿದ್ದರೂ ಅರಣ್ಯ ಇಲಾಖೆಯಲ್ಲಿ ಅಡಳಿತ ಮಾಡತಕ್ಕಂಥವರು ಏನೂ ವಾಡುತ್ತಿರು ್ತರೆ. ಏನು ಕ್ರಮ ತೆಗೆದುಕೊಂಡಿರುತ್ತಾರೆಂಬುದರ ಬಗ್ಗೆ ದಯವಿಟ್ಟು ಸರ್ಕಾರದವರು ಹೇಳಿಕೆ ನ್ನು ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ಎ. ಜೀವಿಜಯ.—ಮಾನ್ಯ ಸಭಾಧ್ಯಕ್ಷರೇ ಈ ಸದಪದಲ್ಲಿ ಏನು ವಿಷಯಗಳನ್ನು ಮಾಷ ದಸ್ಯರು ಪ್ರಸ್ತಾಪ ಮಾಡಿದ್ದಾರೆ ಇಂಥದೇ ಒಂದು ಪ್ರಕರಣವನ್ನು ಶಿವಮೊಗ್ಗ ಜಿಲ್ಲೆಯಂ ರಣ್ಯ ಇಲಾಖೆಯ ಅಧಿಕಾರಿಗಳು ಪತ್ತೆ ಹಚ್ಚಿ ಪೋಲೀಸ್ ಇನ್‌ವೆಸ್ಟಿಗೇಷನ್ ನಡೆಯುತ್ತಿದೆ. ಚ್ಚಿನ ವಿವರಗಳನ್ನು ಮುಂದೆ ತರಿಸಿಕೊಡುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಇದು ಒಂದೇ ಪ್ರಕರಣವಲ್ಲ, ಮನಗಳ್ಳಿ ನರಸಿಂಹಮೂರ್ತಿ ುವರನ್ನು ಅರೆಸ್ಟ್‌ಮಾಡಿ ಪೋಲೀಸ್ ಅಧಿಕಾರಿಗಳು ಅವರನ್ನು ಅಲ್ಲಿಯೇ ಬಿಟ್ಟುಬಿಟ್ಟಿದ್ದಾರೆ. ಕೇವಲ ಇದು ಒಂದೇ ಪ್ರಕರಣವಲ್ಲ. ಬೇರೆ ಬೇರೆ ಡಿವಿಷನ್‌ಗಳಲ್ಲೂ ನಡೆಯುತ್ತಿದೆ. ಸುಮಾರು ಎರಡು ೂರು ವರ್ಷಗಳಿಂದ ಈ ರೀತಿಯಾಗಿ ನಡೆಯುತ್ತಿರುವುದರಿಂದ ಎಷ್ಟೋ ಲಕ್ಷ ರೂಪಾಯಿ ರ್ಕಾರಕ್ಕೆ ನಷ್ಟವಾಗುತ್ತಿದೆ. ಆದ್ದರಿಂದ ಬೇರೆ ಬೇರೆ ಡಿವಿಜನ್‌ಗಳಲ್ಲೂ ನಡೆದಿರತಕ್ಕಂಥ ಇಂಥ ಪ್ರಕರಣಗಳ ಬಗ್ಗೆ ಮಾನ್ಯ ಅರಣ್ಯ ಮಂತ್ರಿಗಳು ಹೇಳಿಕೆಯನ್ನು ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಬಿ. ಎ. ಜೀವಿಜಯ.—ಈಗಾಗಲೇ ಹೇಳಿದ್ದೇನೆ. ಹಲವಾರು ಪ್ರಕರಣಗಳು ಅಧಿಕಾರಿಗಳ ಮನಕ್ಕೆ ಬಂದಿದ್ದು, ಅವುಗಳು ಪೋಲೀಸ್ ಇನ್‌ವೆಸ್ಟಿಗೇಷನ್ ಆಗುತ್ತಿದೆ. ಹೆಚ್ಚಿನ ವಿವರಗಳನ್ನು ನಾಹಿತಿ ಬಂದಮೇಲೆ ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ಒಬ್ಬ ಮಾನ್ಯ ಸದಸ್ಯರು.—ಇದು ಒಂದು ಮಹತ್ವಪೂರ್ಣವಾದ ವಿಚಾರವಾಗಿರುತ್ತದೆ. ಅಧಿಕಾರಿಗಳು ೂಷ ಇದರಲ್ಲಿ ಶಾಮೀಲಾಗಿದ್ದಾರೆ. ಇಂಥ ಕೆಲವು ಕೃತ್ಯಗಳು ನಡೆದಿರುತ್ತದೆ. ಆದ್ದರಿಂದ ಇದನ್ನು ಅರ್ಧಗಂಟೆ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು.—ಇದನ್ನು ಅರ್ಧಗಂಟೆ ಚರ್ಚೆಗೆ ತೆಗೆದುಕೊಂಡು ಬೇರೆ ವಿಷಯಕ್ಕೆ ಹೋಗೋಣ.

ಕುಣಿಗಲ್ ತಾಲ್ಲೂಕಿನ ಹೆಚ್. ಡಿ ಮಲ್ಲಪ್ಪನವರ ಮೇಲೆ ಹಲ್ಲೆ

ಶ್ರೀ ಕೆ. ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ ಇದೊಂದು ಮಹತ್ವವಾದಂಥ ಪ್ರಶ್ನೆ. ುಮುಕೂರು ಜಿಲ್ಲೆ, ಕುಣಿಗಲ್ ತಾಲ್ಲೂಕಿನಲ್ಲಿ ಹೆಚ್. ಡಿ. ಮಲ್ಲಪ್ಪ ಎಂಬುವರು ಇತ್ತೀಚೆಗೆ ಕುನಾವಣೆ ನಡೆದಮೇಲೆ ರಾಜಕೀಯ ದ್ವೇಷದಿಂದ ಹಲ್ಲೆಗೊಳಗಾಗಿದ್ದಾರೆ. ಅವರಿಗೆ ಅವೇಕ ೀತಿಯಲ್ಲಿ ಹಿಂಸೆಗಳನ್ನು ಕೊಟ್ಟಿರುತ್ತಾರೆ. ಅವರಿಗೆ ಸೇರಿದಂಥ ಮುನ್ನೂರಂ ಮಾವಿನ ಮರಗಳನ್ನು ನಾಲ್ಕುನೂರು ತೆಂಗಿನಮರಗಳನ್ನು ಕಡಿಸಿ ಹುಂಬಲಾರದ ಕಷ್ಟನಷ್ಟಗಳಿಗೆ ಒಳಪಡಿಸಿರುತ್ತಾರೆ. ಈ ಂದರ್ಭದಲ್ಲಿ ಮಾನ್ಯ ಮಂತ್ರಿಗಳಾದ ವೈ. ಕೆ. ರಾಮಯ್ಯನವರ ಕೈವಾಡವಿದೆ ಎಂಬ ವಿಷಯ ತಿಳಿದು